ಉಪ್ಪಾರ ಜನಾಂಗಕ್ಕೆ ಮನೆ ಮಂಜೂರು ಮಾಡುವುದು

857 (1051) ಶ್ರೀ ಜಯಚಂದ್ರ ಟಿ.ಬಿ. (ಶಿರಾ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಉಪ್ಪಾರ ಸಮುದಾಯದ ಜನಾಂಗವಿದ್ದು, ಅವರುಗಳು ಕಡುಬಡತನದಲ್ಲಿ ಕುಲಕಸುಬು ಗಳನ್ನು ಮಾಡಿಕೊಂಡು ಗುಡಿಸಲುಗಳಲ್ಲಿ ಶೋಚನೀಯ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜನಾಂಗದ ವಸತಿ ಸಮಸ್ಯೆಯನ್ನು ನೀಗಿಸಲು ಹಾಗೂ ಗುಡಿಸಲು ರಹಿತರನ್ನಾಗಿ ಮಾಡಲು ವಿಶೇಷವಾಗಿ ಪರಿಗಣಿಸಿ ಬಸವಾ ಇಂದಿರಾ ಯೋಜನೆಯಡಿಯಲ್ಲಿ ಮನೆಗಳನ್ನು ಮಂಜೂರು ಮಾಡುವಿರಾ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ.ಸೋಮಣ್ಣ (ವಸತಿ ಸಚಿವರು) :

ಅ) ಇಲ್ಲ.

ಆ) ಉಪ್ಪಾರ ಜನಾಂಗವನ್ನು ವಿಶೇಷವಾಗಿ ಪರಿಗಣಿಸಿ, ವಸತಿ ಸೌಕರ್ಯ ನೀಡಲು ಅವಕಾಶವಿರುವುದಿಲ್ಲ. ಆದರೆ ಈ ಜನಾಂಗದ ಅರ್ಹ ವಸತಿರಹಿತರಿಗೆ ಬಸವ ವಸತಿ ಯೋಜನೆ ಅಥವಾ ಇಂದಿರಾ ಆವಾಸ್ ಯೋಜನೆಯಡಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬಹುದಾಗಿದೆ.

ಇ) ಈ ನಿಟ್ಟಿನಲ್ಲಿ ಸರ್ಕಾರವು ಗುಡಿಸಲು ವಾಸಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ 2010–11ನೇ ಸಾಲಿನಿಂದ "ಬಸವ ವಸತಿ ಯೋಜನೆ" ಯನ್ನು ಜಾರಿಗೆ ತಂದಿರುತ್ತದೆ.

ಅದರಂತೆ ಶಿರಾ ತಾಲ್ಲೂಕು, ಚಿಕ್ಕನಾಯಕನಹಳ್ಳಿ ಮತ್ತು ಶಿರಾ ಎಂಬ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದು, ಬಸವ ವಸತಿ ಯೋಜನೆಯಡಿ 2010–11ನೇ ಸಾಲಿನ್ಲಿ ಶಿರಾ ತಾಲ್ಲೂಕಿಗೆ ಒಟ್ಟು 8,497 ಮನೆಗಳನ್ನು ಮಂಜೂರು ಮಾಡಲಾಗಿದೆ. ಇದಲ್ಲದೇ 2011–12ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ 1404 ಮನೆಗಳ ಗುರಿಯನ್ನು ನೀಡಲಾಗಿದೆ.

ಈ ರೀತಿ ನೀಡಲಾಗಿರುವ ಒಟ್ಟು 9,901 ಗುರಿಯಲ್ಲಿ ಗುಡಿಸಲು ಗಳಲ್ಲಿ ವಾಸಿಸುತ್ತಿರುವ ಉಪ್ಪಾರ ಜನಾಂಗದ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬಹುದಾಗಿದೆ.

857 (1051) Sri. Jayachandra T.B. (Sira) : Minister for Housing,

a) Whether it has come to notice of Government that poor Uppar community people in Sira Taluk of Tumkur Distrit living in huts are leading a Pathetic life.

b) Will you sanction houses under Basava Indira Scheme considering them specially to eradicate housing problem of this community and hutless;

c) If so, what are the actions taken by Government?

Sri. V. Somanna (Minister for Housing) :

a) No.

b) There is no provision to consider Uppara community specially to provide housing facility. However, housing can be facilitated to eligible huseless people of this community under Basava Vasthi Yojana or Indira Awas Yojana.

c) Government is implementing Basava Vasthi Yojana from the year 2010-11 to provide housing to hut-dwellers.

Sira Taluk is having Two constituencies Viz., Sira and Chikkanayakanahalli. Sira taluk has been sanctioned 8,497 houses under Basava Vasathi Scheme during the year 2010-11 and fixed a target of 1,404 houses during the year 2011-12 under Indira Awas Yojana.

Houseless people of Uppara Community can be provided with houses out of a target of 9,901 houses as mentioned above.